ದಿನಾಂಕಃ 27.07.2021
ಅಸಲು ದಾವೆ : 58/2019.
ಪಿ. ಡಬ್ಲ್ಯೂ 1.

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಾದ ಶ್ರೀ ಎನ್ ಪಿ ರವರಿಂದ ಃ</u>

ದಿಃ 05.06.2016 ರ ಕ್ರಯದ ಕರಾರು ಪತ್ರ ಹಾಜರು ಮಾಡಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ನಿಪಿ 7 ರಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಅದನ್ನು ನಾನು ಗುರುತಿಸಿರುತ್ತೇನೆ. 2 ನೇ ಪ್ರತಿವಾದಿ ನಿಪಿ 7 ಕ್ಕೆ ಸಹಿ ಮಾಡಿದ್ದು ಅವರ ಸಹಿಯನ್ನು ಗುರುತಿಸಿದ್ದು ನಿಪಿ 7 ಎ, ನನ್ನ ಸಹಿಯನ್ನು ನಿಪಿ 7 ಬಿ ಎಂದು ಗುರುತಿಸಲಾಗಿರುತ್ತದೆ. ಸೂರ್ಯಪ್ರಕಾಶ್ ಮತ್ತು ಕೆ. ರಾಜು ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರ ಸಹಿಗಳನ್ನು ಗುರುತಿಸಿದ್ದು ಸಹಿಯನ್ನು ನಿಪಿ 7 ಸಿ ಮತ್ತು ನಿಪಿ 7 ಡಿ ಎಂದು ಗುರುತಿಸಲಾಗಿರುತ್ತದೆ. ಎಂ. ಟಿ. ಶ್ರೀನಿವಾಸ್ ರವರು ಪತ್ರ ಬರಹಗಾರರಾಗಿದ್ದು ಅವರ ಸಹಿ ಮತ್ತು ಸೀಲ್ ನ್ನು ನಾನು ಗುರುತಿಸಿದ್ದು, ಸಹಿಯನ್ನು ನಿಪಿ 7 ಇ ಎಂದು ಗುರುತಿಸಲಾಗಿರುತ್ತದೆ.

ಪ್ರತಿವಾದಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.